
August 2024 Vol-I Issue 08 ISSN :3048-4944

# ಅಧ್ಯಾತ್ಮ ಸಂಪ್ರದಾಯ

# AADHYATMA SAMPRADAYA

Peer Reviewed

A MULTI DISCIPLINARY JOURNAL



Published by :
Shri Adhyatma Trust Committee
Bhandiwad Tq. Hubballi-580023

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

# ಆಧ್ಯಾತ್ಮ ಸಂಪ್ರದಾಯ

ಬಹುಶಿಸ್ತೀಯ ಸಂಶೋಧನಾ ಮಾಸಿಕ ಪತ್ರಿಕೆ

ISSN : 3048-4944

Vol-1 No. 8 August 2024

ಪ್ರಕಾಶಕರು :

ಅಧ್ಯಕ್ಷರು

ಶ್ರೀ ಆಧ್ಯಾತ್ಮ ಟ್ರಸ್ಟ ಕಮೀಟಿ ಭಂಡಿವಾಡ

ಸಂಪಾದಕರು

**ಡಾ. ರಾಮಚಂದ್ರ ಪಡೆಸೂರ**

ಸಹ ಸಂಪಾದಕರು

**ಶ್ರೀ ನಾಗರಾಜ ಬಾರಕೇರ**



## ಸಂಪಾದಕ ಮಂಡಳಿ

- **ಡಾ. ಅಡಿವೆಪ್ಪ ಚ. ವಾಲಿ**
  ಸಹ ಪ್ರಾಧ್ಯಾಪಕರು
  ಶ್ರೀಮತಿ ಗೌರಮ್ಮ ಬ. ಅಂಕಲಕೋಟಿ ಸ.ಪ್ರ.ದ. ಕಾಲೇಜು, ಶಿಗ್ಗಾಂವ
- **ಡಾ. ಮಲ್ಲಿಕಾರ್ಜುನ ಎನ್. ಮೂಲಿಮನಿ**
  ಮುಖ್ಯ ಗ್ರಂಥಪಾಲಕರು
  ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀಡಿ
- **ಪ್ರೋ. ಸಿ. ಎಸ್. ಕುಮ್ಮೂರ**
  ಪ್ರಾಂಶುಪಾಲರು
  ಸರಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ
- **ಡಾ. ಜೆ.ಎಮ್.ಚಂದುನವರ**
  ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು
  ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-580003
- **ಪ್ರೋ. ಪದ್ಮಮ್ಮಾ**
  ಪ್ರಾಧ್ಯಾಪಕರು,
  ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸಂಶೋಧನಾ ವಿಭಾಗ
  ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ
- **ಡಾ. ಮಲ್ಲಿಕಾರ್ಜುನ ಕೆ**
  ಕನ್ನಡ ಸಹ ಪ್ರಾಧ್ಯಾಪಕರು
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ
- **ಡಾ. ಮಾರಣ್ಣಾ, ಓ.**
  ಪ್ರಾಧ್ಯಾಪಕರು,
  ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಸಂಶೋಧನಾ ವಿಭಾಗ
  ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
- **ಡಾ. ಬಿ.ಎನ್. ಅರವಿಂದ ಕುಮಾರ**
  ಕೃಷಿ ವಿಜ್ಞಾನ ಪ್ರಾಧ್ಯಾಪಕರು,
  ಕೃಷಿ ವಿಶ್ವವಿದ್ಯಾಲಯ ಧಾರವಾಡ-580005
- **ಡಾ. ಎಸ್. ಶಶಿರೇಖಾ**
  ಕನ್ನಡ ಸಹ ಪ್ರಾಧ್ಯಾಪಕರು
  ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು.
- **ಶ್ರೀ ವ್ಯಾಪಾರಿ ಮಧುಸೂದನ್ ಕೆ**
  ವಾಣಿಜ್ಯ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀಡಿ
- **ಶ್ರೀ ಆನಂದ ಇಂದೂರು**
  ಕನ್ನಡ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಗ್ಗಾಂವ
- **ಶ್ರೀ ನವೀನ ಎನ್**
  ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕರು
  ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೀಡಿ


## ಪರಿವಿಡಿ


1. ಗ್ರಂಥಾಲಯ ಮತ್ತು ಜ್ಞಾನಪ್ರಸರಣ
   – ಡಾ.ಎಸ್.ಶಶಿರೇಖಾ 01
2. ಶಾಪಗಳ ಹಿನ್ನೆಲೆ ಮತ್ತು ಸ್ವರೂಪ
   – ಚಂದ್ರಪ್ರಕಾಶ್ 04
3. ಡಾ. ಎ.ಸಿ.ವಾಲಿ ಗುರೂಜಿಯವರ ತತ್ವಪದಗಳು: ಒಂದು ತಾತ್ವಿಕ ಚಿಂತನೆ
   – ಪ್ರೊ. ಎನ್.ಎಸ್.ಬಾರಕೇರ 09
4. ಕಾಫಿ ತೋಟದಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಸ್ಥಿತಿಗತಿ
   – ಕೃತಿಕಾ ಕೆ.ಆರ್ 13
5. ಮಾಸ್ತಿ ಕತೆಗಳ ಕುರಿತ ವಿಮರ್ಶೆಗಳ ತಾತ್ವಿಕ ಜಿಜ್ಞಾಸೆ
   – ಮಂಜುನಾಥ ಎಂ. ಕರಿಲಿಂಗಣ್ಣವರ 16
6. ಯಲಿಶಿರೂರಿನ ಭೋಗೇಶ್ವರ ದೇವಾಲಯ: ವಾಸ್ತು ವಿವರಣೆ
   – ಕೃಷ್ಣ ಗು ಕಿರೇಸೂರ 20
7. ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ವಿಘಟನೆ ಮತ್ತು ಅಖಂಡತೆಯ ಹಂಬಲ
   – ಸಂಗಮೇಶ 24
8. ಕಾವ್ಯಾನಂದರ ನಾಟಕಗಳು : ಪ್ರಕೃತಿ ಹಿನ್ನಲೆಯಲ್ಲಿ ಪ್ರೀತಿ ಮತ್ತು ಅಸ್ತಿತ್ವದ ಹುಡುಕಾಟ
   – ಅನ್ನಪೂರ್ಣ ಎಚ್ 27
9. ಹರಿಹರನ 'ಬಸವರಾಜದೇವರ ರಗಳೆ'ಯ ಶಾಪ ಪ್ರಸಂಗ
   – ಚಂದ್ರಪ್ರಕಾಶ್ 32
10. ಮೌನೇಶ್ವರರ ಜೀವನ ಚರಿತ್ರೆಗಳು
    – ಡಾ. ರಾಮಚಂದ್ರ ಪಡೆಸೂರ 37



The views expressed in the articles side are the individual opinions of the authors and they in no way represent or reflect the opinion of AADHYATMA SAMPRADAYA nor does AADHYATMA SAMPRADAYA subscribe to these views in no way. All disputes are subject to the jurisdiction of Hubballi court only.


: ಸೂಚನೆ :

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನ 2000 ಶಬ್ದಗಳನ್ನು ಮೀರಬಾರದು ಹಾಗೂ ಸಂಶೊಧನಾ ಲೇಖನವಾದಲ್ಲಿ 2500 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಯ ಚಂದಾದರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು sampadakaruaas@gmail.com ಕಳಿಸಿರಿ.

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ISSN : 3048-4944

# ಮೌನೇಶ್ವರರ ಜೀವನ ಚರಿತ್ರೆಗಳು

ಡಾ. ರಾಮಚಂದ್ರ ಪಡೆಸೂರ

ಮೌನೇಶ್ವರರನ್ನು ಕುರಿತು ಬಂದಿರುವ ಜೀವನ ಚರಿತ್ರೆಗಳಲ್ಲಿ ಎಲ್ಲಾ ಲೇಖಕರು ಅವರ ಜೀವನ ಮತ್ತು ಪವಾಡಗಳನ್ನು ಕುರಿತು ಚರ್ಚಿಸಿರುವುದನ್ನು ಕಾಣಬಹುದಾಗಿದೆ. ಅದರಲ್ಲಿ ಪ್ರಮುಖವಾಗಿ 23 ಕೃತಿಗಳಲ್ಲಿ ಮೌನೇಶ್ವರರನ್ನು ಕುರಿತು ದೀರ್ಘವಾಗಿ ಹಾಗೂ ಸಂಕ್ಷಿಪ್ತವಾಗಿ ಬಳಸಿರುವುದನ್ನು ಕಾಣಬಹುದು. ಅವುಗಳಲ್ಲದೇ ಇನ್ನಿತರ ಪುರಾಣ ನಾಟಕ, ಲೇಖನ, ಸಂಶೋಧನಾ ಪ್ರಬಂಧಗಳಲ್ಲಿಯೂ ಕೂಡ ಸಂಕ್ಷಿಪ್ತವಾಗಿ ಚರಿತ್ರೆಯನ್ನು ಕಟ್ಟುವ ಪ್ರಯತ್ನವನ್ನು ಮಾಡಿದ್ದಾರೆ. ಅವುಗಳಲ್ಲಿ ಜೀವನ ಚರಿತ್ರೆಗಳನ್ನೇ ಮುಖ್ಯವಾಗಿಟ್ಟುಕೊಂಡು ಬಂದಿರುವ ಕೃತಿಗಳೆಂದರೆ.

1. ತಿಂಥಣಿ ಶ್ರೀಮೌನೇಶ್ವರರ ಚರಿತ್ರೆ : ಸಂ. ಪರಮೇಶಪ್ಪ ವೀರಪ್ಪ ಅಬ್ಬಿಗೇರಿ, 1975
2. ತಿಂಥಣಿ ಮೌನೇಶ್ವರರ ಮಹಿಮಾ ಚರಿತ್ರೆ : ಎಚ್.ಟಿ.ಮಹಾಂತೇಶ ಶಾಸ್ತ್ರಿಗಳು, 1976
3. ತಿಂಥಣಿ ಶ್ರೀಮೌನೇಶ್ವರ ಲೀಲಾಮೃತ : ಸಂ.ಎ.ಎನ್.ಚಂದಪ್ಪ, ಎನ್.ಸಿ. ಅಲಬನೂರ, 1970
4. ಶ್ರೀಮೌನೇಶ್ವರ ಚರಿತ್ರೆ : ಅನ್ನದಾನಯ್ಯ ಸ್ವಾಮಿಗಳು, 1980
5. ಸಗರನಾಡಿನ ಮಹಾತ್ಮ ಶ್ರೀಮೌನೇಶ್ವರರು : ಪಾ. ವಿ. ಅರಕೇರಿ, 1982
6. ಮೌನದೇವನ ಸನ್ನಿಧಿಯಲ್ಲಿ : ಅರ್ಜುನಾಚಾರ್ಯ ತೆಂಗಳಿಕರ್, 1985
7. ಮೌನೇಶ್ವರ ವಿಜಯ : ಲಿಂಗಾಚಾರ್ಯ ಮಾಗೋಡ, 1992
8. ಮೌನೇಶ್ವರ ಮಹಾತ್ಮೆ : ಧೂಳೇಂದ್ರ ಅರಗಂಜಿ, 2001
9. ಶ್ರೀಮೌನೇಶ್ವರ ಚರಿತಾಮೃತ : ಡಾ.ಎ.ಎಫ್.ಮೋಹನ್‌ರಾವ್, 2005
10. ತಿಂಥಣಿ ಮೌನಪ್ಪಯ್ಯ : ಪ್ರೊ.ಸೂಗಯ್ಯ ಹಿರೇಮಠ, 2006
11. ಯುಗಪುರುಷ ಮೌನೇಶ್ವರ : ಡಾ.ಕೆ.ಅನಂತರಾಮು, 2016

ಈ ಎಲ್ಲ ಜೀವನ ಚರಿತ್ರೆಗಳು ಒಬ್ಬ ಚರಿತ್ರೆಕಾರನನ್ನೇ ಇಟ್ಟುಕೊಂಡು ಬಂದಿವೆಯೆಂದರೆ ಮೌನೇಶ್ವರನು ಸದಾ ಸಂಚಾರಿಯಾಗಿದ್ದನೆಂಬುದನ್ನು ಗಮನಿಸುವಂಥದ್ದು. ವರವಿ, ಲಿಂಗನಬಂಡಿ, ತಿಂಥಣಿ, ಶಿರಸಂಗಿಯ ಪ್ರದೇಶಗಳಲ್ಲಿ ಆಯಾ ಸಮಾಜದ ಬಂಧುಗಳಿರುವುದರಿಂದ ಇಷ್ಟೊಂದು ಜೀವನ ಚರಿತ್ರೆ ಬರಲಿಕ್ಕೆ ಕಾರಣವೆಂಬುದನ್ನು ನಾವು ಅರಿತುಕೊಳ್ಳಬಹುದು. ಕಾಯಕವನ್ನೇ ಮುಖ್ಯವಾಗಿರಿಸಿಕೊಂಡ ಜನಸಾಮಾನ್ಯರಿಗೆ ಕಾಯಕದ ಮಹತ್ವವನ್ನು ಸಾರಿರುವ ಮಹಾಪುರುಷರನ್ನು ಪೌರಾಣಿಕ ಪುರುಷನನ್ನಾಗಿ ಹೇಳಿ ಅವರ ಚಿಂತನೆಗಳನ್ನು ತಲುಪಿಸುವಲ್ಲಿ ಈ ಜೀವನ ಚರಿತ್ರೆಗಳನ್ನು ಅವಲೋಕಿಸುವಂತದ್ದು. ಮೌನೇಶ್ವರರ ಪವಾಡಗಳಲ್ಲಿ ಜನರನ್ನು ಪ್ರಜ್ಞಾವಂತರನ್ನಾಗಿಸುವ ಬಗೆ ಇಂತಿವೆ.

ಮೌನೇಶ್ವರರ ಜೀವನವನ್ನು ಗಮನಿಸಿದಾಗ ಚಿಕ್ಕಂದಿನಿಂದ ಅನ್ಯಾಯ ಹಾಗೂ ಬಲ್ಲಿದವರ ವಿರುದ್ಧ ಪ್ರಶ್ನಿಸಿದ ಬಗೆಯನ್ನು ಇಲ್ಲಿ ಕಾಣಬಹುದು. ರಾಜಕುಮಾರನಿಗೆ ಹೊಡೆದ ಚೆಂಡಿನೆಟಿನಿಂದ ಆತ ಸತ್ತು ಹೋಗುವುದನ್ನು ನೋಡಿದಾಗ ರಾಜಪ್ರಭುತ್ವದಲ್ಲಿ ರಾಜನೇ



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಆಗಲೀ ಅಥವಾ ರಾಜನ ಮಗನೇ ಆಗಲೀ ಅವರು ಮಾಡುವ ಧೋರಣೆಯನ್ನು ಇಲ್ಲಿ ಸೂಚಿಸಿದ್ದಾರೆ. ಅಧಿಕಾರದಲ್ಲಿದ್ದವರು ಏನೇ ಮಾಡಿದರೂ ಸರಿ ಎನ್ನುವುದನ್ನು ತಿಳಿಸುವ ಪ್ರಯತ್ನವು ಕೂಡ ಇಲ್ಲಿದೆ.

ಇನ್ನು ಪುಣ್ಯಜೀವಿ ಪರ್ವತಪ್ಪನ ದಾರಿದ್ರ್ಯವನ್ನು ನಿವಾರಿಸುವಲ್ಲಿ ನೆರೆ-ಹೊರೆಯ ಬಾಂಧವ್ಯವನ್ನು ತಿಳಿಸಿದ್ದಾರೆ. ಕಾಯಕದಿಂದ ನಿರತನಾದವನಿಗೆ ಸಂಪತ್ತು ಬಂದಿರುವ ಬಗೆಯನ್ನು ಇಲ್ಲಿ ಚರಿತ್ರೆಕಾರರು ಕಟ್ಟಿ ಕೊಟ್ಟಿದ್ದಾರೆ. ಮೌನೇಶನು ರಾಚೋಟಿ ವೀರಭದ್ರನ ಜಾತ್ರೆಗೆ ಹೋಗಲು ಶೇಷಮ್ಮಳನ್ನು ಮೀಸಲು ತುಪ್ಪ ಕೇಳಿದಾಗ ಮೌನೇಶ್ವರರು ನಾವು ಸಾಗಬೇಕಾದ ದಾರಿಯ ಗುರಿ ನಿಶ್ಚಯವಾಗಿದ್ದರೆ ಅದನ್ನು ಮುಟ್ಟಲು ಸರಳವಾಗುವುದೆಂಬ ಮಾಹಿತಿಯನ್ನು ಇಲ್ಲಿ ನೀಡುತ್ತಾರೆ. ಅಲ್ಲಿಂದ ಮೌನೇಶನು ಮೀಸಲು ತುಪ್ಪ ತಿನ್ನಿಸುವಲ್ಲಿ ಬಾಗಿಲು ಬೀಗ ಕಳಚಿ ಬಿದ್ದು ಶ್ರೀವೀರಭದ್ರ ತಾನೇ ಹೊರಬರುತ್ತಾನೆ. ಅಂದರೆ ದೇವರು ಮತ್ತು ಭಕ್ತರ ನಡುವಿನ ಪೂಜಾರಿ ವ್ಯವಸ್ಥೆಯನ್ನು ನಿರಾಕರಿಸುವ ಕಲ್ಪನೆ ಇಲ್ಲಿದೆ.

ಅಲ್ಲದೇ ರಾಚೋಟಿ ಕ್ಷೇತ್ರದ ಜಂಗಮರ ಲಿಂಗ ಕಣ್ಮರೆಯಾಗುವಲ್ಲಿ ಜಂಗಮರಾದವರು ಸದಾ ಸಂಚಾರಿಗಳಾಗಿರಬೇಕು. ಸ್ಥಾವರವಾಗಿ ಉಳಿಯಬಾರದೆಂಬ ಸಂದೇಶವನ್ನು ಹಾಗೂ ನೀನೇ ದೇವರು ಎಂಬ ಭಾವವನ್ನು ಹೇಳಿದ್ದಾರೆ. ಕಾಶಿಯಲ್ಲಿ ಗುಪ್ತಾ ದೀಕ್ಷಿತರು ಏರ್ಪಡಿಸಿದ ಭೋಜನ ಕೂಟದಲ್ಲಿ ಮೌನೇಶ್ವರರ ಉಡುಗೆಯನ್ನು ನೋಡಿ ಬಾಹ್ಯ ಸ್ವಚ್ಛತೆಗೆ ಮಹತ್ವ ನೀಡಿ ಅಂತರಂಗಕ್ಕೆ ಶುದ್ಧಿ ಇಲ್ಲದಂತೆ ವರ್ತಿಸುವುದನ್ನು ಹಾಗೂ ಗುಪ್ತಾ ದೀಕ್ಷಿತನ ಅಹಂಕಾರವನ್ನು ಕಳೆದು ಹಾಕಿರುವುದನ್ನು ಚರಿತ್ರೆಗಳಲ್ಲಿ ಕಾಣಲಾಗಿದೆ.

ಅದೇ ರೀತಿಯಾಗಿ ಬಿಜಾಪೂರ ಬಾದಶಹನ ಎದುರಲ್ಲಿ ಶಿಕ್ಷೆಗೊಳಗಾದರೂ ಮತ್ತೆ ಹೊರಗಡೆಯೂ ಕೂಡ ಕಂಡಿರುವುದನ್ನು ನೋಡಿದಾಗ ದೇವರ ಸ್ವರೂಪವು ಎಲ್ಲೆಲ್ಲಿಯೂ, ಎಲ್ಲರಲ್ಲಿಯೂ ಇರುವುದು, ಆದರೆ ನಾವು ಸುಮ್ಮನೇ ಜಡವಾಗಿ ಕುಳಿತಿದ್ದೇವೆ ಎಂಬುವಲ್ಲಿ ಸದಾ ಸಂಚಾರಿಯಾಗುವ ಸಂದೇಶವನ್ನು ಇಲ್ಲಿ ಸಾರುತ್ತಾನೆ. ಸಾವಳಗಿ ಶಿವಲಿಂಗ ಸ್ವಾಮಿಗಳನ್ನು ಕೈಲಾಸಕ್ಕೆಂದು ಕರೆದೊಯ್ಯುವಲ್ಲಿ ಶಿವಲಿಂಗ ಸ್ವಾಮಿಗಳು ಆತನ ಸಹಚರರನ್ನೂ ಕೈಲಾಸಕ್ಕೆ ಕರೆದೊಯ್ಯಲು ಕೇಳಿಕೊಳ್ಳುತ್ತಾರೆ. ಇಲ್ಲಿ ಮೌನೇಶ್ವರರು ಸಂಘಟನಾತ್ಮಕ ಶಕ್ತಿಯ ಬಗೆಗೆ ಹೇಳಿರುವುದನ್ನು ಚರಿತ್ರೆಗಳಲ್ಲಿ ಕಾಣುತ್ತೇವೆ. ಅದರಿಂದ ನಮ್ಮವರೇ ಆದವರು ಅಸೂಹೆಯಿಂದಲಾದರೂ ನಮ್ಮೊಡನೆ ಬರಲು ತವಕಿಸುತ್ತಾರೆಂಬುದನ್ನು ಚರಿತ್ರೆಕಾರರು ತಿಳಿಸಿದ್ದಾರೆ.

ಶಿರಸಂಗಿಯಲ್ಲಿ ಸ್ವ ಭಾಂದವರು ಬಂಗಾರದ ನಾಣ್ಯಗಳಿಗಾಗಿ ಬಂದವರು ಅವನ ಸೇವೆಗಾಗಿ ಬರಲಿಲ್ಲ. ಇಲ್ಲಿ ಸತ್ಯ ಎನ್ನುವುದು ಕೂಡ ಹಾಗೆಯೇ ಅದರ ಬೆಂಬತ್ತಿ ಬರುವವರು ಕಡಿಮೆ, ಅಸತ್ಯ ಎಂಬ ಬಂಗಾರದ ನಾಣ್ಯಗಳ ಹಿಂದೆ ಹೋಗುವವರೇ ಹೆಚ್ಚೆಂಬುದು ಗಮನಾರ್ಹವಾಗಿ ಕಂಡು ಬರುವಂಥದ್ದು. ಲಕ್ಷ್ಮೇಶ್ವರದಲ್ಲಿ ಜರುಗಿದ ಸಂತೆಯಲ್ಲಿ ಪಿಡ್ಡವ್ವಳಿಗೆ ನೀಡಿದ ಕದಿರಿನ ಸಂದರ್ಭದಲ್ಲಿ ಮೌನೇಶ್ವರರು ತಮ್ಮ ಮನೆತನದ ವೃತ್ತಿಯನ್ನು ಕೂಡ ಮುಂದುವರೆಸುತ್ತಿದ್ದರೆಂಬುದನ್ನು ಮತ್ತು ಕಾಯಕಕ್ಕೆ ಸದಾ ತತ್ಪರರಾಗಿದ್ದರೆಂಬುದನ್ನು ಇಲ್ಲಿ ಗಮನಿಸಬೇಕು. ಅಲ್ಲದೇ ಇದೇ ಸಂದರ್ಭಕ್ಕೆ ಇನ್ನೊಬ್ಬರ ಋಣವನ್ನೆಂದಿಗೂ ಇಟ್ಟುಕೊಳ್ಳಬಾರದೆಂಬುದು ಇಲ್ಲಿ ಆಶಯವಾಗಿ ವ್ಯಕ್ತಪಡಿಸಿದ್ದಾರೆ.

ಇನ್ನು ಮುಳಗುಂದ ಮಹಾಸ್ವಾಮಿಗಳಿಗೆ ಹಳ್ಳವನ್ನು ದಾಟಿಸುವ ಸಂದರ್ಭದಲ್ಲಿ ಮೌನೇಶ್ವರರು ಕುರುಬನ ರೂಪದಲ್ಲಿ ಕಂಡು ಅವರೆಲ್ಲರನ್ನೂ ತಮ್ಮ ಹೆಗಲ ಮೇಲೆ ಹೊತ್ತು ಹಳ್ಳದ ಆಚೆಗೆ ಇಳಿಸಿದರು. ಇದೇ ರೀತಿಯ ಸಂದರ್ಭವೊಂದು ಮೌನೇಶ್ವರರಿಗೆ ಪರ್ವತಜ್ಜನು ರಾಚೋಟಿಗೆ ಬರಲು ಶಿರಬಾಗಿ ಕೇಳಿದುದನ್ನು ನೋಡಿದರೆ ಮೌನೇಶ್ವರರು ಮೇಲು-ಕೀಳೆನ್ನುವ ದೃಷ್ಟಿಯನ್ನು ತೊಡೆದು ಹಾಕಿರುವುದನ್ನು ಚರಿತ್ರೆಗಳಲ್ಲಿ ಕಾಣಬಹುದಾಗಿದೆ.

ಹಾಗೆಯೇ ಸತ್ತಂತೆ ನಟಿಸಿದವನು ಸತ್ತು ಹೋದ ಸಂದರ್ಭವನ್ನು ತಿಳಿಸುವಲ್ಲಿ ಮಾನವನು ಕ್ರಿಯೆಯಲ್ಲಿ ಸಕ್ರಿಯನಾಗದೇ ಕುಳಿತಾಗ ಗುರು ಎನ್ನುವವನು ಬಂದು ಕ್ರಿಯಾಶೀಲರನ್ನಾಗಿ ಮಾಡುವನೆಂಬುದೇ ಮಲ್ಲಣ್ಣನನ್ನು ಎಬ್ಬಿಸಿದ ಸಂದೇಶವಾಗಿ ಕಾಣಬಹುದಾಗಿದೆ. ಅಸ್ಪೃಶ್ಯ ಬಾಲಕನೊಬ್ಬನನ್ನು ಬದುಕಿಸುವಲ್ಲಿ ಜಾತಿ ಹೀನನಾದವನು ಕೂಡ ಗುರುವಿನ ಕೃಪೆಯಿಂದ ಸಮಾಜ ಕಾರ್ಯ ಮಾಡುವ ಬಗೆಯನ್ನು ಹೇಳಿದ್ದಾರೆ.

ಈ ಎಲ್ಲ ಜೀವನ ಚರಿತ್ರೆಗಳು ಮುಖ್ಯವಾಗಿ ಪ್ರಕಾಶನಗಳಿಂದ ಹೊರಬಂದಂತವುಗಳಾಗಿವೆ. ಕೃತಿಕಾರರು ಅವರಿಂದ ಪ್ರೇರಣೆಗೆ ಒಳಗಾಗಿ ಬರೆದಿರುವ ಕಾರಣಕ್ಕೆ ಚರಿತ್ರೆಕಾರರನ್ನು ಪೌರಾಣೀಕರಿಸಿರುವುದನ್ನು ನಾವು ಕಾಣಬಹುದಾಗಿದೆ. ಅಲ್ಲದೇ ಅಲ್ಲಿ ಚರಿತ್ರೆಕಾರನು



CO-ORDINATOR
IQAC
K.L.E.S Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಕೂಡ ಹೆಚ್ಚು ಉಪಮೇಯಕ್ಕೆ ಒಳಗಾಗಿರುವುದನ್ನು ಸೂಕ್ಷ್ಮಾವಲೋಕನ ಮಾಡಿಕೊಳ್ಳಬೇಕು. ಅಂದಿನ ಸಮಾಜದಲ್ಲಿರುವ ಸಮಸ್ಯೆಗಳಿಗೆ ಪತ್ಯುತ್ತರವಾಗಿ ಹೇಳಿದ ಮಾತು ಅಥವಾ ಜ್ಞಾನವೇ ಚರಿತ್ರೆಗಳಲ್ಲಿ ಪವಾಡವಾಗಿರುವುದನ್ನು ನಾವು ಕಾಣುತ್ತೇವೆ.

ಕಾಯಕ ಮಾಡಿದವರ ಮನೆಯ ಅನ್ನವನ್ನು ಊಟ ಮಾಡಬೇಕೆ ವಿನಃ ಖಾಲಿ ಕುಳಿತವರ ಮನೆಯಲ್ಲಿ ಊಟ ಮಾಡಬಾರದೆಂಬುದನ್ನು ಹಾಗೂ ನಮ್ಮತನವನ್ನು ನಾವೇ ವೈಭವೀಕರಿಸುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲವೆಂದು ಹೇಳಿದ್ದಾರೆ.

ಒಟ್ಟಾರೆಯಾಗಿ ಮೌನೇಶ್ವರರ ಜೀವನ ಚರಿತ್ರೆಗಳು ಪ್ರಕಟ ಮಾಡಿದ ಪ್ರಕಾಶನಗಳು ಒಂದು ಕೃತಿಯನ್ನು ನಾವಾಗಿಯೇ ಅಧ್ಯಯನಕ್ಕೆ ಒಳಪಡಿಸುವ ಕ್ರಮವೇ ಬೇರೆ. ಅದನ್ನು ಬೇರೆಯವರು ಲೇಖಕರಿಗೆ ಬರೆಯಲು ಕೊಟ್ಟಾಗ ಬರುವ ಫಲಿತಗಳೇ ಬೇರೆಯಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಗದಗ, ಗುಲಬರ್ಗಾ ಪ್ರಕಾಶನದಿಂದ ಹೊರಬಂದಿರುವ ಕೃತಿಗಳು ಅಂದಿನ ಕಾಲಕ್ಕೆ ಇರುವ ಸಾಹಿತ್ಯಾಭಿರುಚಿಗೆ ತಕ್ಕಂತೆ ಅಂದು ಬೇಕಾದ ಪುರಾಣ/ಚರಿತ್ರೆಗಳನ್ನು ನೀಡಿ ಸಾಹಿತ್ಯಾಸಕ್ತರಿಗೆ ಹಾಗೂ ಸಮುದಾಯದವರಿಗೆ ನೀಡಿದ ಕೃತಿಯಾಗಿವೆ. ಪೌರಾಣಿಕವಾಗಿ ಹೇಳಿರುವ ಈ ಕೃತಿಗಳೇ ಮುಂದೆ ಹಬ್ಬದ ದಿನಗಳಲ್ಲಿ, ಜಯಂತಿಗಳಲ್ಲಿ ಪುರಾಣ ರೂಪದಲ್ಲಿ ಪಠಣವಾಗುವಾಗ ಇನ್ನಷ್ಟು ಪೌರಾಣಿಕತೆಯನ್ನು ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ಮೌನೇಶ್ವರರು ಪವಾಡಗಳ ಮೂಲಕವಾಗಿಯೇ ಸಮಾಜವನ್ನು ತಿದ್ದುವ ಕೈಂಕರ್ಯವನ್ನು ಹೊಂದಿದ್ದರೆಂಬುದು ಚರಿತ್ರೆಗಳಲ್ಲಿ ನಿರೂಪಿತವಾಗಿವೆ.



CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-58